# ಡಾಲರ್ ಎದುರು ರೂಪಾಯಿ ಬೀಳುವುದೇಕೆ?

**ವಿಶ್ವ ಮಾರುಕಟ್ಟೆಯಲ್ಲಿ ಡಾಲರ್ ಮತ್ತು ರೂಪಾಯಿ ನಡುವಿನ ಮೌಲ್ಯ ಹೆಚ್ಚಾಗುತ್ತಿರುವುದಕ್ಕೆ ಕಾರಣಗಳನ್ನು ವಿಶ್ಲೇಷಿಸುವ ಈ ಬರಹ, ದೇಶ ದೇಶಗಳ ನಡುವಿನ ವಹಿವಾಟಿನ ಸ್ವರೂಪವನ್ನು ಸರಳವಾಗಿ ತಿಳಿಸುವ ಪ್ರಯತ್ನವಾಗಿದೆ.**

**■ ಜೆ.ಎನ್. ಜಗನ್ನಾಥ್**

ಒಂದು ಡಾಲರ್‌ಗೆ ಮೂರು ರೂಪಾಯಿ ಮೂವತ್ತು ಪೈಸೆ! ಇದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಇದ್ದ ಡಾಲರ್ ಹಾಗೂ ರೂಪಾಯಿ ಮೌಲ್ಯ. ಈಗ 1 ಡಾಲರ್‌ಗೆ 86.50 ರೂಪಾಯಿ ಆಸುಪಾಸಿನಲ್ಲಿದೆ! ಈ ಅಗಾಧ ಅಂತರ ಭಾರತದ ರೂಪಾಯಿ ತನ್ನ ಬೆಲೆ ಕಳೆದುಕೊಳ್ಳುತ್ತಿರುವುದನ್ನು ಸೂಚಿಸುತ್ತಿದೆ; ರೂಪಾಯಿಯನ್ನು ಬಲಗೊಳಿಸಲು ಸರ್ಕಾರ ಮತ್ತು ಆರ್‌ಬಿಐ ಪ್ರಯತ್ನ ನಡೆದೇ ಇದೆ. ಅಂದಹಾಗೆ, ಡಾಲರ್ ಮತ್ತು ರೂಪಾಯಿ ನಡುವೆ ಯಾಕಿಷ್ಟು ಅಂತರ? ಇದನ್ನು ಅರ್ಥ ಮಾಡಿಕೊಳ್ಳಲು ಹಣದ ಬಳಕೆಯ ಹಿನ್ನೆಲೆ ಮತ್ತು ಮಹತ್ವವನ್ನು ತಿಳಿದುಕೊಳ್ಳಬೇಕು.

ಒಬ್ಬನ ಬಳಿ ಒಂದು ವಸ್ತುವು ಹೆಚ್ಚಿನ ಸಂಖ್ಯೆಯಲ್ಲಿ ಇದ್ದು ಮತ್ತೊಬ್ಬರ ಬಳಿ ಅವನಿಗೆ ಬೇಕಾಗುವ ಬೇರೆ ವಸ್ತುವಿರುವಾಗ, ಇಬ್ಬರೂ ತಮ್ಮ ವಸ್ತುಗಳನ್ನು ವಿನಿಮಯ ಮಾಡುಕೊಳ್ಳುತ್ತಿದ್ದ ಕಾಲವಿತ್ತು. ಒಂದು ವಸ್ತುವಿನ ಬೆಲೆ ಬಹಳ ಹೆಚ್ಚಾಗಿದ್ದು ಮತ್ತೊಂದು ವಸ್ತುವಿನ ಬೆಲೆ ಅತಿ ಕಡಿಮೆ ಇರುವಾಗ ಈ ವ್ಯವಸ್ಥೆ ಕಠಿಣವಾಯಿತು. ಉದಾಹರಣೆಗೆ, ಒಬ್ಬ ವ್ಯಕ್ತಿ ಒಂದು ಹಸುವನ್ನು ಕೊಟ್ಟು ಮಾವಿನ ಹಣ್ಣು ಕೊಳ್ಳಲಾಗದು. ಹಾಗೆಯೇ, ಒಂದು ಹಸುವನ್ನು ಬಿಡಿಬಿಡಿಯಾಗಿ ಮಾಡಲಾಗದು. ಹಾಗಾಗಿ, ಯಾವುದೇ ವಸ್ತುವನ್ನು ಒಂದು ನಿರ್ದಿಷ್ಟ ವಸ್ತುವಿನ ಮೂಲಕ ಪಡೆದುಕೊಳ್ಳಲು ಉಪಯೋಗಿಸುವ ಒಂದು ಸಾಧನ ಬೇಕಾಗಿತ್ತು. ಅದುವೇ ಹಣ. ಎಲ್ಲ ವಸ್ತುಗಳನ್ನು ಹಣದ ಮೂಲಕ ಅಳೆಯಬಹುದು. ನಿರ್ದಿಷ್ಟ ಬೆಲೆ ತಿಳಿಸಬಹುದು. ಹಣವನ್ನು ಮುಂದೆ ಉಪಯೋಗಿಸಲು ಉಳಿತಾಯ ಮಾಡಬಹುದು. ಈ ಅನುಕೂಲದಿಂದಾಗಿ, ಹಣದ ಬಳಕೆ ಪ್ರಾರಂಭವಾಯಿತು. ಪ್ರತಿಯೊಂದು ದೇಶವೂ ತನ್ನದೇ ಆದ 'ಹಣ' (ಕರೆನ್ಸಿ) ಹೊಂದಿದೆ. ಹೀಗೆ, ತನ್ನದೇ ಆದ ಕರೆನ್ಸಿ ಹೊಂದುವ ಮೊದಲು ಕುವೈತ್‌ನಲ್ಲಿ ಭಾರತದ ರೂಪಾಯಿಯೇ ಬಳಕೆಯಲ್ಲಿತ್ತು ಎನ್ನುವುದು ಸ್ವಾರಸ್ಯಕರ ಸಂಗತಿ.

ಪ್ರಪಂಚದಲ್ಲಿ ಅನೇಕ ದೇಶಗಳಿವೆ. ಪ್ರತಿ ದೇಶವೂ ಕೆಲವು ವಸ್ತುಗಳು, ಸೇವೆಗಳನ್ನು ಪೂರೈಸುವ ಸಾಮರ್ಥ್ಯಕ್ಕೆ ಪ್ರಸಿದ್ಧವಾಗಿರುತ್ತದೆ. ಉದಾಹರಣೆಗೆ, ಭಾರತ ತಂತ್ರಜ್ಞಾನಕ್ಕೆ ಪ್ರಸಿದ್ಧವಾದರೆ, ಸೌದಿ ಅರೇಬಿಯಾ ಕಚ್ಚಾ ತೈಲಕ್ಕೆ ಪ್ರಸಿದ್ಧ. ಮನುಷ್ಯನಿಗೆ ಅಗತ್ಯವಾದ ವಸ್ತುಗಳು ವಿಶ್ವದೆಲ್ಲೆಡೆ ಹಂಚಿಹೋಗಿರುವುದರಿಂದ ರಫ್ತು ಮತ್ತು ಆಮದು ದೇಶಗಳ ಮಧ್ಯೆ ಅನಿವಾರ್ಯ. ಆಗ ಕರೆನ್ಸಿಯ ಸಮಸ್ಯೆ ತಲೆದೋರುತ್ತದೆ. ಎರಡು ದೇಶಗಳ ಕರೆನ್ಸಿ ಭಿನ್ನವಾಗಿರುತ್ತದೆ ಹಾಗೂ ಅವುಗಳ ಮೌಲ್ಯ ಒಂದೇ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಎರಡು ದೇಶವೂ ಒಪ್ಪುವ ಒಂದು ಪ್ರಬಲ ಕರೆನ್ಸಿಯ ಅವಶ್ಯಕತೆ ಉಂಟಾಗುತ್ತದೆ. ಪ್ರಸ್ತುತ ವಿಶ್ವದಲ್ಲಿ ಅಂಥದೊಂದು ಪ್ರಬಲ ಕರೆನ್ಸಿ ಅಮೆರಿಕದ ಡಾಲರ್.

ಎರಡನೆಯ ಮಹಾಯುದ್ಧದ ನಂತರ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ (ಯುಎಸ್‌ಎ) ದೇಶವನ್ನು ಪ್ರಪಂಚದ ಅತ್ಯಂತ ಪ್ರಬಲ ದೇಶವೆಂದು ಪರಿಗಣಿಸಲಾಯಿತು. ಪ್ರಪಂಚದ ಅತ್ಯಂತ ಹೆಚ್ಚಿನ ಉತ್ಪಾದನೆ (ಜಿಡಿಪಿ) ಹೊಂದಿರುವ ದೇಶ ಅಮೆರಿಕ. ಭಾರತ ಐದನೆಯ ಸ್ಥಾನದಲ್ಲಿದೆ. ಅಮೆರಿಕದ ಜನಸಂಖ್ಯೆ 30 ಕೋಟಿ. ಭಾರತದ ಜನಸಂಖ್ಯೆ 140 ಕೋಟಿ. ಆದರೂ ಅಮೆರಿಕದ ಜಿಡಿಪಿ ನಮ್ಮ ದೇಶಕ್ಕಿಂತ 7.5ರಷ್ಟು ಹೆಚ್ಚಿದೆ. ವಿಶ್ವದ ಶೇ. 30ರಷ್ಟು ವಿಮಾನ ನಿಲ್ದಾಣಗಳು ಅಮೆರಿಕದಲ್ಲಿದೆ. ಅಮೆರಿಕಗೆ ಎಲ್ಲ

